(*d*) Does not arise in view of reply to clause (*c*).

(*e*) This will be examined.

ಶ್ರೀ ಪುಟ್ಟೇಗೌಡ.—ಸರ್ಕಾರದವರು (*a*), (*b*) ಮತ್ತು (*c*) ಪ್ರಶ್ನೆಗಳಿಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದಾರೆ. ಸರ್ಕಾರದವರು ರಸ್ತೆಯಲ್ಲಿ ಮೂರು ಮೈಲಿ ಕೆಲಸವಾಡಿರುವುದು ನಿಜವೇ ?

*ಶ್ರೀ ಆರ್. ಚೆನ್ನಿಗರಾಮಯ್ಯ.—ಗೊತ್ತಿಲ್ಲ.

ಶ್ರೀ ಪುಟ್ಟೇಗೌಡ.—ಆ ರೀತಿ ಕೆಲಸ ನಡೆದಿದ್ದರೆ ತಮ್ಮ ಉತ್ತರ ತಪ್ಪಾಗುವುದಿಲ್ಲವೇ ?

ಅಧ್ಯಕ್ಷರು —ಕೆಲಸ ನಡೆದಿರುವುದೇ ಗೊತ್ತಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ —ಈ ಮೂರು ಹೋಬಳಿಗಳನ್ನು ಕೂಡಿಸತಕ್ಕ ರಸ್ತೆಯ ವಿಷಯ ಗೊತ್ತಿಲ್ಲವೆಂದು ಹೇಳಿದಿರಿ. ಸಂಬಂಧಪಟ್ಟ ಇಲಾಖೆಯವರು ತಮಗೆ ಸುಳ್ಳು ರಿಪೋರ್ಟು ಕೊಟ್ಟಿದ್ದಾರಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸುಳ್ಳು ರಿಪೋರ್ಟ್ ಅಲ್ಲ. ಈ ಉತ್ತರಕೊಟ್ಟ ಸಂದರ್ಭದಲ್ಲಿ ಕೆಲಸ ನಡೆಯದಿರಬಹುದು.

ಶ್ರೀ ಎಚ್. ಜಿ ನರಸಿಂಹೇಗೌಡ.—ಉತ್ತರ ಕೊಟ್ಟಿರುವುದು ಈ ವರ್ಷ; ಇದಕ್ಕೆ ಮುಂಚೆಯೇ ಕೆಲಸ ನಡೆದಿದೆಯೆಂದು ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಗೊತ್ತಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ರೋಡ್ ಆಗದಿರುವ ಪಕ್ಷದಲ್ಲಿ ಜಾಗ್ರತೆ ಎಸ್ಟಿಮೇಟ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—Examine ಮಾಡುತ್ತೇವೆ.

Sub-Overseers serving for more than three years in Hassan Division.

Q.—3. Sri B. N. BORANNA GOWDA (Belur).—

Will the Government be pleased to state :—

(*a*) the number of Sub-Overseers that are serving for more than three years in Hassan Division ;

(*b*) whether it is a fact that some Sub-Overseers are serving for more than 6 years in one P.W. Sub-Division ;

(*c*) whether there is any Government rule that public servants should be given a change after 3 years of service ?

A.—Sri H. K. VEERANNA GOWDH (Minister for Public Works).—

(*a*) Four.

(*b*) No.

(*c*) The Codal rule is that no Executive Officers of the P.W.D. should generally be kept in one place for over three years.

ಶ್ರೀ ಬಿ. ಎನ್. ಬೋರಣ್ಣಗೌಡ.—(*a*) ಪ್ರಶ್ನೆಗೆ ಉತ್ತರವಾಗಿ ನಾಲ್ಕುಜನ ಎಂದು ಹೇಳಿದ್ದೀರಿ. ಈ ನಾಲ್ಕು ಜನರೂ ಎಷ್ಟೆಷ್ಟು ದಿವಸಗಳಿಂದ ಇದ್ದಾರೆಂಬುದನ್ನು ಹೇಳುತ್ತೀರಾ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಉತ್ತರ ಬಂದ ದಿವಸಕ್ಕೆ ಒಬ್ಬರು ಮೂರು ವರ್ಷ ಮೂರು ತಿಂಗಳು 14 ದಿವಸಗಳಿಂದ, ಇನ್ನೊಬ್ಬರು ಮೂರು ವರ್ಷ ಒಂದು ತಿಂಗಳು 23 ದಿವಸಗಳಿಂದ, ಮೂರನೆಯವರು ಮೂರು ವರ್ಷ ಒಂಬತ್ತು ತಿಂಗಳಿಂದ, ನಾಲ್ಕನೆಯವರು ಇದೇ ಡಿವಿಜನ್ನಿನಲ್ಲಿಯೇ ಇದ್ದರೂ ಬೇರೆ ಬೇರೆ ಸಬ್ ಡಿವಿಜ್ ಗಳಲ್ಲಿದ್ದು ಒಟ್ಟು ಈ ಡಿವಿಜ್‌ನಲ್ಲಿ ಏಳು ವರ್ಷ ನಾಲ್ಕು ತಿಂಗಳುಕಾಲ ಇದ್ದಾರೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಇಷ್ಟು ವರ್ಷಗಳಿಂದ ತಮಗೆ ಅನುಕೂಲವಾದ ಒಂದೇ ಕಡೆ ಇರುವುದಕ್ಕೆ ಅವಕಾಶ ಕೊಡದೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಬೇಕೆಂದು ಏಕೆ ಏರ್ಪಾಡು ಮಾಡಿಲ್ಲ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಸನದ ಒಂದೇ ಡಿವಿಜ್‌ನಲ್ಲಿದ್ದರೂ ಬೇರೆಬೇರೆ ಸಬ್‌ಡಿವಿಜ್‌ನಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಜಾಗ್ರತೆ ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಎಗ್ಸಿಕ್ಯೂಟಿವ್ ಎಂಜಿನಿಯರಿಗೆ ಸಲಹೆ ಕೊಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯೋಚನೆ ಮಾಡುತ್ತೇವೆ

Roads transferred from District Board to Public Works Department.

Q.—13. Sri B. N. BORANNA GOWDA (Belur).—

Will the Government be pleased to state :—

(*a*) the number of roads together with their mileage transferred from District Board to P.W.D. in Hassan District ;

(*b*) the special circumstances for such transfer ?

A.—Sri H. K. VEERANNA GOWDH (Minister for Public Works).—

(*a*) *Vide* Statement appended.

(*b*) It was found that the division of responsibility for maintaining certain classes of roads had inherent disadvantages, particularly in regard to improvements and adjustment of quota of cost.

(SRI H. K. VEERANNA GOWDH)

Statement showing the names of roads that were transferred from District Board to P.W.D. as per G. O. No. 3648-3768—R.B. 8-53-2, dated 8th August 1953.

Sl. No.	*Name of road*		*Length of road in miles*	*furlongs*
1	Channarayapatna—Narasipur—Kodlipet road	...	5	4
2	Tiptur—Channarayapatna road	...	21	0
3	Tiptur—Dudda road	...	15	0
4	Arasikere —Huliyar road	...	22	0
5	Banavar—Sakrepatna road	...	2	4
6	Mudigere—Belur road	...	12	0
7	Bharavathavally—Alur—Loop road	...	3	0
8	Bage—Belur road	...	17	0
9	Anemahal—Mudigere road	..	12	2
10	Manjarabad—Kodlipet road	...	15	0
11	Holenarsipur—Channarayapatna road	...	5	0
12	Kattaya—Hallibyle road	...	19	0
13	Banavasi—Yeslurpet road	...	18	0
14	Sakalespur—Arehally—Cheekanahally road	...	18	0
15	Banavar—Sira road	...	15	0
16	Alur—Biccode road	...	12	4
17	Alur—Kundur road	...	8	2
18	Hassan—Salagame—Halebid road	...	19	0
19	Hanabal—Devaraunda road	...	8	0
20	Vanagur—Mallipatna road	...	8	0
21	Banavar—Railway Station road	...	0	4
22	Arehally—Biccode road	...	5	4
23	Hiresave—Nuggehally road	...	9	0
24	Halebid—Temple road	...	0	4
25	Sravanabelagola—Kikkere road	...	6	4

Sri B. N. BORANNA GOWDA.—I have no supplementaries.

ಶ್ರೀ ಎಚ್. ಜಿ. ನರಸಿಂಹೇಗೌಡ.—ಯಾವಯಾವ ಡಿಸ್ಟ್ರಿಕ್ಟ್‌ಬೋರ್ಡ್ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಇರಾಖೆಗೆ ವಹಿಸಬೇಕೆಂಬುದರ ಬಗ್ಗೆ ಪಟ್ಟಿ ಕೇಳಿರುವುದು, ಆ ರಸ್ತೆಗಳು ಹೀನಸ್ಥಿತಿಯಲ್ಲಿವೆಯೆಂದು ತಾನೆ ?

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ರಸ್ತೆಗಳನ್ನು ಕೂಡಲೆ ಪಿ. ಡಬ್ಲ್ಯು. ಡಿ. ಇರಾಖೆಗೆ ಸೇರಿಸಿಕೊಳ್ಳುತ್ತೀರಾ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಹಿಂದೆಯೇ ಒಂದು ಸಂದರ್ಭದಲ್ಲಿ ಜಾಗ್ರತೆ ಸೇರಿಸುವುದು ಅಷ್ಟು ಸುಲಭವಾದ ಮಾತಲ್ಲವೆಂದು ಹೇಳಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹಾಸನ ಡಿಸ್ಟ್ರಿಕ್ಟಿನ ರಸ್ತೆಗಳ ವಿಚಾರ ಹೇಳುವುದಾದರೆ ಅವು ಬಹಳ ಹೀನಸ್ಥಿತಿಯಲ್ಲಿವೆ. ಮಲೆನಾಡು ಪ್ರದೇಶವಾಗಿರುವುದರಿಂದ ಆ ಕಡೆ ಬೇಗ ಗಮನಕೊಟ್ಟು ಸರಿಪಡಿಸುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಸನ ಡಿಸ್ಟ್ರಿಕ್ಟಿಗಿಂತ ಹೆಚ್ಚಿಗೆ ಮಲೆನಾಡಿನ ರಸ್ತೆಗಳಿವೆ. ಅದ್ದರಿಂದ ವ್ಯೆಯಕ್ತಿಕವಾಗಿ ಇಂಥ ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಸಾರ್ವತ್ರಿಕವಾಗಿ ಯೋಚನೆ ಮಾಡಿ ಒಂದು ನಿರ್ಧಾರ ಮಾಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡುತ್ತಾರೆಂದು ಪಿ. ಡಬ್ಲ್ಯು. ಡಿ. ಯವರೂ, ಪಿ. ಡಬ್ಲ್ಯು. ಡಿ. ಯವರು ರಿಪೇರಿ ಮಾಡುತ್ತಾರೆಂದು ಡಿಸ್ಟ್ರಿಕ್ಟ್ ಬೋರ್ಡಿನವರೂ ನುಮ್ಮನಿದ್ದು ಹಿಂದೆ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿದ ರಸ್ತೆಗಳೆಲ್ಲಾ ಕೆಟ್ಟುಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಸ್ತೆಗಳನ್ನು ರಿಪೇರಿ ಮಾಡದೆ ಕೆಟ್ಟುಹೋಗುತ್ತಿವೆ ಎಂಬುದು ನಿಜ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರೂ ಮಾಡಿಸುವುದಿಲ್ಲ, ತಾವೂ ಮಾಡುವುದಿಲ್ಲ. ಈಗಲಾದರೂ, ಪಿ. ಡಬ್ಲ್ಯು. ಡಿ. ಗೆ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ.

ಶ್ರೀ ಎಚ್. ಕೆ. ವೀರಣ್ಣಗೌಡ.—ಉತ್ತರ ಆಗಲೇ ಹೇಳಿದ್ದೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಗಳನ್ನು ಸರ್ಕಾರದವರು ತೆಗೆದುಕೊಳ್ಳುವ ಸಂದರ್ಭದಲ್ಲಿ ಸರ್ಕಾರದವರು ಬೇಗ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಹಳ ಒಳ್ಳೆಯದು.

ಶ್ರೀ ಎಚ್. ಪಿ. ನರಸಿಂಹೇಗೌಡ.—ಈ ಮೂರು ವರ್ಷದ ಅವಧಿಯಲ್ಲಿ ಅವುಗಳನ್ನು ತೆಗೆದುಕೊಂಡು ರಿಪೇರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಣ ಒದಗುವುದಾದರೆ ಮೂರು ವರ್ಷ ಬೇಕಾಗಿಲ್ಲ. ಒಂದೇ ವರ್ಷದಲ್ಲಿ ಮಾಡಬಹುದು.

District Board Roads proposed to be included in the State Fund Roads in Bangalore District.

Q.—350. **Sri K. V. BYRE GOWDA** (Bangalore North).—

Will the Government be pleased to state :—

the number of District Board roads in Bangalore District that are proposed to be included in the "State Fund" roads with their names and respective mileage (Talukwar figures may be furnished) ?

A.—**Sri H. K. VEERANNA GOWDH** (Minister for Public Works).—

A total length of 250 miles was proposed to be taken over. Details are still under examination.

ಶ್ರೀ ಕೆ. ವಿ. ಬೈರೇಗೌಡ—250 ಮೈಲಿ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದಿದೆಯೆಂದು ಹೇಳಿದ್ದೀರಿ. ಇವುಗಳನ್ನು ತೆಗೆದುಕೊಳ್ಳುವುದರಲ್ಲಿ ಏನಾದರೂ ಪ್ರಯೋರಿಟಿಯಮೇಲೆ ತೆಗೆದುಕೊಳ್ಳುತ್ತೀರಾ ಅಥವಾ ಯಾವ ಸನ್ನಿವೇಶ ನೋಡಿಕೊಂಡು ತೆಗೆದುಕೊಳ್ಳುತ್ತೀರಿ ?

*ಶ್ರೀ ಎಚ್. ಕೆ. ವೀರಣ್ಣಗೌಡ.—250 ಮೈಲಿಗಳನ್ನು ತೆಗೆದುಕೊಂಡರೆ ಇಷ್ಟು ಖರ್ಚಾಗುತ್ತದೆಂದು ಹೇಳಿದ್ದಾರೆ. ಅದರಮೇಲೆ ಕಡಮೆ ತೆಗೆದುಕೊಂಡರೆ ಒದಗಿಸುವುದಕ್ಕಾಗುತ್ತದೆಯೇ ನೋಡಿಕೊಂಡು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಸೇತುವೆಗಳನ್ನೇನಾದರೂ ಕಟ್ಟ ಬೇಕಾಗುತ್ತದೆಯೇ ಮುಂತಾಗಿ ನಾನಾ ವಿವರಗಳನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಬನ್ನುಗಳ ರಾಷ್ಟ್ರೀಕರಣವಾದಮೇಲೆ ಬೇಕಾದಷ್ಟು ಖರ್ಚಾಗಿ ಬನ್ನುಗಳು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳಲ್ಲಿ ಓಡಾಡುವುದಕ್ಕೆ ಷುರುವಾಗಿರುವುದರಿಂದ ಈ ರಸ್ತೆಗಳಿಗೆ ಪ್ರಯಾರಿಟಿ ಕೊಟ್ಟು ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯೋಚನೆ ಮಾಡುತ್ತೇವೆ.

Sri J. H. SHAMSUDDIN.—What are the criteria for taking over these roads from the D.L.B. to the P.W.D. ?

ಶ್ರೀ ಎಚ್. ಕೆ. ವೀರಣ್ಣಗೌಡ.—criteria ಏನೂ ಇಲ್ಲ. ಮೊದಲನೆಯದಾಗಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಣವಿಲ್ಲದಿರುವುದು, ಎರಡನೆಯದಾಗಿ ಆ ರಸ್ತೆಗಳು ಪ್ರಾಮುಖ್ಯವಾದುವೇ ಎಂಬುದನ್ನು ನೋಡಬೇಕು. ಡಿಸ್ಟ್ರಿಕ್ಟ್ ಬೋರ್ಡಿನವರು ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಹಣವಿಲ್ಲವೆಂದು ಈಗ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಯೋಚನೆಮಾಡುತ್ತಿದ್ದಾರೆ.

Sri J. H. SHAMSUDDIN.—Will Government extend the same criteria to the other D.L.B. roads in the other parts of the State ?

Sri H. K. VEERANNA GOWDH.—As I explained yesterday, it is the intention of Government to make this principle applicable to the whole State.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಬೋರ್ಡ್ ರಸ್ತೆಗಳನ್ನು P.W.D.ಗೆ ತೆಗೆದುಕೊಳ್ಳುವ ಯೋಜನೆಯೂ ಸೇರಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಏನೂ ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಹಂಚಿದೆ.

9-30 A.M.

Sri Kadidal MANJAPPA.—Is the Government aware that, when I was the Revenue Minister, I gave an assurance to the Legislature that the Government would take over the roads from the District Boards to compensate them for the loss occasioned on account of the amendment made to the District Boards Act ?

Sri H. K. VEERANNA GOWDH.—Because of that assurance Government requested the Chief Engineer to submit proposals to the Government in consultation with Deputy Commissioners and District Boards as to the roads which are to be taken over by the Government and I have explained a number of times in this House the reasons for not taking a final decision.

Sri H. M. CHANNABASAPPA.—Was it on the initiative of the District Boards that this proposal was made or did Government call for proposal from the Special Officers of the District Boards ?

Sri H. K. VEERANNA GOWDH.—I have explained that the Government asked the Chief Engineer to submit proposals in consultation with the Deputy Commissioners and the District Boards concerned.